ಅಧ್ಯಾಯ – 7

# ಅಂತರರಾಷ್ಟ್ರೀಯ ಆರ್ಥಿಕ ಮತ್ತು ಹಣಕಾಸಿನ ಸಹಕಾರ

# INTERNATIONAL ECONOMIC AND MONETARY CO-OPERATION

ಜಗತ್ತಿನಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಅನಭಿವೃದ್ಧಿ ರಾಷ್ಟ್ರಗಳ ನಡುವೆ ಅಭಿವೃದ್ಧಿಯಲ್ಲಿ ತೀವ್ರತರವಾದ ಅಸಮಾನತೆ ಸೃಷ್ಟಿಯಾಗುತ್ತಿದೆ. ಇದರಿಂದಾಗಿ ಕೆಲವು ರಾಷ್ಟ್ರಗಳು ತಮ್ಮ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳುತ್ತಾ ಮುಂದುವರಿಯುತ್ತಿದ್ದು, ಇನ್ನೂ ಕೆಲವು ರಾಷ್ಟ್ರಗಳಲ್ಲಿ ಉನ್ನತ ಜೀವನಮಟ್ಟ, ರಾಷ್ಟ್ರೀಯ ಆದಾಯ ಮತ್ತು ತಲಾದಾಯ ಗರಿಷ್ಠಮಟ್ಟ ದಲ್ಲಿರುವಿಕೆ, ತಾಂತ್ರಿಕ ಮುನ್ನಡೆ, ಸಂಪನ್ಮೂಲಗಳ ಸಮರ್ಪಕ ಬಳಕೆ ಕಾಣುತ್ತಿದ್ದೇವೆ ಇದಕ್ಕೆ ವಿರುದ್ಧವಾಗಿ ಅನಭಿವೃದ್ಧಿ ರಾಷ್ಟ್ರಗಳಲ್ಲಿ ಬಡತನ, ನಿರುದ್ಯೋಗ, ವಸತಿ ಕೊರತೆ, ಹಸಿವು ಮೂಲಭೂತ ಸೌಕರ್ಯಗಳ ಅಸಮರ್ಪಕತೆಯಿಂದ ನಿಕೃಷ್ಟ ಜೀವನ ನಿರ್ವಹಣೆಯನ್ನು ಅನಭಿವೃದ್ಧಿ ರಾಷ್ಟ್ರಗಳಲ್ಲಿ ಕಾಣುತ್ತಿದ್ದೇವೆ.

ಅಭಿವೃದ್ಧಿ ಸಾಧಿಸಿರುವ ಬಹುಪಾಲು ರಾಷ್ಟ್ರಗಳು ಉತ್ತರಾರ್ಧಗೋಳದಲ್ಲಿರುವುದರಿಂದ ಅವುಗಳನ್ನು ಉತ್ತರದ ದೇಶಗಳು ಎಂದೂ, ಅವುಗಳ ಆದಾಯ ಅತಿ ಹೆಚ್ಚಿರುವುದರಿಂದ ಉನ್ನತ ಆದಾಯದ ದೇಶಗಳು ಎಂದೂ ಕರೆಯಲಾಗಿದೆ. ಹಿಂದುಳಿದ ಬಡ ರಾಷ್ಟ್ರಗಳಲ್ಲಿ ಹೆಚ್ಚಿನ ದೇಶಗಳು ದಕ್ಷಿಣಾರ್ಧಗೋಳದಲ್ಲಿರುವುದರಿಂದ ದಕ್ಷಿಣದ ದೇಶಗಳೆಂದು ಮತ್ತು ಅನಭಿವೃದ್ಧಿ ರಾಷ್ಟ್ರಗಳ ಆದಾಯ ಕಡಿಮೆ ಇರುವುದರಿಂದ ಕಡಿಮೆ ವರಮಾನದ ದೇಶಗಳು ಎಂದು ಕರೆಯಲಾಗಿದೆ. ಬಡರಾಷ್ಟ್ರಗಳು ತಮ್ಮಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಅಭಿವೃದ್ಧಿ ಪಥದಲ್ಲಿ ಸಾಗಲು ಹೊಸ ರೀತಿಯ ಆರ್ಥಿಕ ವ್ಯವಸ್ಥೆ ಅನುಷ್ಠಾನಗೊಳ್ಳ ಬೇಕೆಂಬುದು ಅನಭಿವೃದ್ಧಿ ರಾಷ್ಟ್ರಗಳ ಬೇಡಿಕೆಯಾಗಿದೆ,

ಜಗತ್ತಿನಲ್ಲಿ ಅನಭಿವೃದ್ಧಿ ರಾಷ್ಟ್ರಗಳಲ್ಲಿ ಅಭಿವೃದ್ಧಿಗೆ ಉತ್ತೇಜನ ಆಗುವ ರೀತಿಯಲ್ಲಿ ಹೊಸ ಆರ್ಥಿಕ ವ್ಯವಸ್ಥೆ ಅನುಷ್ಠಾನಗೊಳ್ಳಬೇಕು ಎಂಬ ಕೂಗು ಸೃಷ್ಟಿಯಾಗಲು ಮುಂದಿನ ಅಂಶಗಳೂ ಕಾರಣವಾಗಿವೆ.

Scanned by CamScanner

**1) ಸಾಲದ ಹೊರೆ (Debt burden) :**

ಅನಭಿವೃದ್ಧಿ ರಾಷ್ಟ್ರಗಳು ತೀವ್ರತರವಾದ ಸಾಲದ ಹೊರೆಯಿಂದ ನರಳುತ್ತಿವೆ. ಸಾಲನೀಡಿರುವ ಶ್ರೀಮಂತ ರಾಷ್ಟ್ರಗಳು ಹಲವು ರೀತಿಯಲ್ಲಿ ಶೋಷಿಸುತ್ತಿವೆ ಇದರಿಂದಾಗಿ ಸಾಲ ಮರುಪಾವತಿಸಲಾಗದ ಸ್ಥಿತಿಯಲ್ಲಿ ನರಳುತ್ತಿವೆ.

**2) ಸಂದಾಯಬಾಕಿ ಸಮಸ್ಯೆ (Problem of Balance of Payment) :**

ಹಿಂದುಳಿದ ರಾಷ್ಟ್ರಗಳು ತೀವ್ರತರವಾದ ಸಂದಾಯ ಬಾಕಿ ಕೊರತೆ ಸಮಸ್ಯೆಯನ್ನು ಎದುರಿಸುತ್ತಿದ್ದು, ವ್ಯಾಪಾರ ಚಟುವಟಿಕೆಗಳು ತೀವ್ರ ಹಿನ್ನಡೆಯಲ್ಲಿವೆ ಜೊತೆಗೆ ರಫ್ತಿಗೆ ಪೂರಕವಾದ ಅಭಿವೃದ್ಧಿ ಕಾರ್ಯಕ್ರಮಗಳು ಅಸ್ಥಿತ್ವದಲ್ಲಿ ಇಲ್ಲದಂತಾಗಿದೆ.

**3) ಅತಿಪ್ರಸರಣ ಸಮಸ್ಯೆ (Inflation Problem) :**

ಹಿಂದುಳಿದ ರಾಷ್ಟ್ರಗಳು ತೀವ್ರತರವಾದ ಅತಿ ಪ್ರಸರಣ ಸಮಸ್ಯೆ ಎದುರಿಸುತ್ತಿದ್ದು, ಅಭಿವೃದ್ಧಿಗೆ ಉತ್ತೇಜನ ಇಲ್ಲದಂತಾಗಿದೆ ಇದರಿಂದಾಗಿ ಅಂತರಾಷ್ಟ್ರೀಯ ವ್ಯಾಪಾರ ಕುಸಿತ ಅನುಭವಿಸುತ್ತಿದ್ದು, ಆರ್ಥಿಕ ಹಿಂಜರಿತ ಕಾಣಲು ಕಾರಣವಾಗಿದೆ.

**4) ಅಧಿಕ ಬಡ್ಡಿದರ (High rate of Interest) :**

ಅನಭಿವೃದ್ಧಿ ರಾಷ್ಟ್ರಗಳ ಅಭಿವೃದ್ಧಿ – ಪರ ಚಟುವಟಿಕೆಗಳಿಗೆ ಸಾಲಸೌಲಭ್ಯ ಒದಗಿಸುವಾಗ IMF, IBRD ಮೊದಲಾದ ಹಣಕಾಸಿನ ಸಂಸ್ಥೆಗಳು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹಲವು ರೀತಿಯ ಷರತ್ತುಗಳನ್ನು ವಿಧಿಸುವ ಜೊತೆಗೆ ಅಧಿಕ ಬಡ್ಡಿದರ ನಿಗದಿಪಡಿಸುತ್ತಿರುವುದು ಹಿಂದುಳಿದ ರಾಷ್ಟ್ರಗಳು ಅಭಿವೃದ್ಧಿಗೆ ಅಡ್ಡಿಯಾಗಿ ಪರಿಣಮಿಸಿದೆ.

**5) ತೀವ್ರತರ ಸಮಸ್ಯೆ ಎದುರಿಸುತ್ತಿರುವಿಕೆ (Facing severe problems) :**

ಹಿಂದುಳಿದ ರಾಷ್ಟ್ರಗಳು ಶಿಕ್ಷಣ, ಆರೋಗ್ಯ, ನೈರ್ಮಲ್ಯ, ನೈರ್ಮಲ್ಯೀಕರಣಗಳ ಸೌಲಭ್ಯದ ಕೊರತೆ, ಕೃಷಿ, ಕೈಗಾರಿಕಾ ಕ್ಷೇತ್ರಗಳು ಆಧುನೀಕರಣಗೊಳ್ಳದೆ ಹಿಂದುಳಿದಿರುವಿಕೆ, ನಿರುದ್ಯೋಗ, ಬಡತನ, ಕೆಳಮಟ್ಟದ ಜೀವನ ಸ್ಥಿತಿ, ವಸತಿ ಸೌಲಭ್ಯಗಳ ಕೊರತೆ, ಸಾಮಾಜಿಕ ಮೌಲ್ಯೋತ್ಪಾದಕ ಚಟುವಟಿಕೆಗಳು ತೀರಾ ಕೆಳಮಟ್ಟದಲ್ಲಿರುವಿಕೆ ಹೀಗೆ ಹಲವು ರೀತಿಯ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ನರಳುತ್ತಿವೆ. ಈ ಸಮಸ್ಯೆಗಳಿಂದ ಹೊರಬಂದು ಅಭಿವೃದ್ಧಿ ಪಥದಲ್ಲಿ ಮುನ್ನಡೆಯುವಿಕೆ ಅಗತ್ಯವಾದ ಪರಿಸರ ನಿರ್ಮಾಣಕ್ಕೆ ಈ ರಾಷ್ಟ್ರಗಳು ಎದುರು ನೋಡುತ್ತಿವೆ.

Scanned by CamScanner

### 6) ಅಸಮಾನರ ನಡುವೆ ಸ್ಪರ್ಧೆ (Competetion between inequals) :

ಶ್ರೀಮಂತ ರಾಷ್ಟ್ರಗಳು ತಮ್ಮ ಅಭಿವೃದ್ಧಿ ಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸುವ ಮೂಲಕ ಪರಸ್ಪರ ಪೈಪೋಟಿಯಲ್ಲಿ ತೊಡಗಿವೆ ಬದಲಾಗಿ ಬಡ ರಾಷ್ಟ್ರಗಳ ಪ್ರಗತಿಗೆ ಸಹಕರಿಸುತ್ತಿಲ್ಲ ಜೊತೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಜೊತೆ ಬಡ ರಾಷ್ಟ್ರಗಳು ಯಾವುದೇ ಹಂತದಲ್ಲೂ ಪೈಪೋಟಿ ನಡೆಸಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಅನಭಿವೃದ್ಧಿ ರಾಷ್ಟ್ರಗಳು ತಮ್ಮ ಕೆಳಮಟ್ಟದ ಅಭಿವೃದ್ಧಿಯಿಂದ ಮುನ್ನಡೆದು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಜೊತೆ ಸ್ಪರ್ಧಿಸುವಂತಹ ಸನ್ನಿವೇಶ ಸೃಷ್ಟಿಯಾಗುವುದನ್ನು ಕಾಯುತ್ತಿವೆ.

### 7) ಬ್ರಿಟನ್ ವುಡ್ ವ್ಯವಸ್ಥೆ (System of Brettenwoods) :

ಎರಡನೆ ಮಹಾಯುದ್ಧದ ನಂತರ ಅಂತರಾಷ್ಟ್ರೀಯವಾಗಿ 'ಅಭಿವೃದ್ಧಿ ಮತ್ತು ಸಹಕಾರ'ದ ಹಿನ್ನಲೆಯಲ್ಲಿ ಅಸ್ತಿತ್ವಕ್ಕೆ ಬಂದ IMF, IBRD, IFC, IDA ಮೊದಲಾದವುಗಳಿಂದ ಹಿಂದುಳಿದ ರಾಷ್ಟ್ರಗಳಿಗೆ ನಿರೀಕ್ಷಿಸಿದ ಪ್ರಮಾಣದಲ್ಲಿ ನೆರವು ದೊರೆತಿಲ್ಲ ಕಾರಣ ಈ ಸಂಸ್ಥೆಗಳು ಶ್ರೀಮಂತ ರಾಷ್ಟ್ರಗಳ ಹಿಡಿತದಲ್ಲಿರುವುದೇ ಆಗಿದೆ. ಇದರಿಂದಾಗಿ ಅನಭಿವೃದ್ಧಿ ರಾಷ್ಟ್ರಗಳು ಪಾವತಿ ಶಿಲ್ಕಿನ ಸಮಸ್ಯೆ ಬಗೆಹರಿಸಿಕೊಳ್ಳಲು ಸಾಧ್ಯವಾಗಿಲ್ಲ ಜೊತೆಗೆ ಅಭಿವೃದ್ಧಿ ಪರ ಚಟುವಟಿಕೆಗಳನ್ನು ಕೈಗೊಂಡು ಹಲವು ರೀತಿಯ ತೀವ್ರತರ ಸಮಸ್ಯೆಗಳನ್ನು ಬಗೆಹರಿಸಲು ಬೇಕಾದ ಬಂಡವಾಳವು ದೊರೆಯುತ್ತಿಲ್ಲ. ಆದ್ದರಿಂದ ಅನಭಿವೃದ್ಧಿ ರಾಷ್ಟ್ರಗಳು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಹೊಸ ರೀತಿಯ ಕಾರ್ಯಚಟುವಟಿಕೆಗಳನ್ನು ನಿರೀಕ್ಷಿಸುತ್ತಿವೆ.

### 8) ಹೆಚ್ಚುತ್ತಿರುವ ಅಂತರ (Expansion of gap) :

ಅಭಿವೃದ್ಧಿಯ ವೇಗದಲ್ಲೂ ತೀವ್ರತರವಾದ ಅಂತರ ಇರುವುದರಿಂದ ಶ್ರೀಮಂತ ದೇಶಗಳು ಹೆಚ್ಚು ಹೆಚ್ಚು ಶ್ರೀಮಂತವಾಗುತ್ತಾ ಸಾಗುತ್ತಿದ್ದರೆ, ಬಡರಾಷ್ಟ್ರಗಳು ತೀರಾ ಕೆಳಮಟ್ಟಕ್ಕೆ ಸಾಗುತ್ತಿವೆ ಇದರಿಂದಾಗಿ ಈ ರಾಷ್ಟ್ರಗಳ ನಡುವೆ ಅಂತರ ನಿರಂತರವಾಗಿ ಹೆಚ್ಚುತ್ತಿದ್ದು, ಜಾಗತಿಕ ಅಸಮಾನತೆ ಹಲವು ರೀತಿಯ ದುಷ್ಪರಿಣಾಮಗಳಿಗೆ ಅವಕಾಶ ಕಲ್ಪಿಸಿಕೊಡುತ್ತಿದೆ ಇದನ್ನು ತಪ್ಪಿಸಲು ಹೊಸ ಅಂತರರಾಷ್ಟ್ರೀಯ ವ್ಯವಸ್ಥೆಯೊಂದರ ಉಗಮಕ್ಕಾಗಿ ಹಿಂದುಳಿದ ರಾಷ್ಟ್ರಗಳು ಕಾಣುತ್ತಿವೆ.

ಈ ಮೇಲಿನ ಎಲ್ಲಾ ಅಂಶಗಳೂ ಹಿಂದುಳಿದ ರಾಷ್ಟ್ರಗಳಿಗೆ ಅನುಕೂಲಕರವಾದ, ಸನ್ನಿವೇಶ ಅಂತರರಾಷ್ಟ್ರೀಯವಾಗಿ ನಿರ್ಮಾಣವಾಗಿರುವುದನ್ನು ತೋರಿಸುತ್ತದೆ. ಆದ್ದರಿಂದ ಅನಭಿವೃದ್ಧ ರಾಷ್ಟ್ರಗಳು ಆರ್ಥಿಕ ಪ್ರಗತಿಗೆ ಪೂರಕವಾದ ಸಹಕಾರವನ್ನು, ಉತ್ತೇಜನವನ್ನು

Scanned by CamScanner

ನೀಡುವಂತಹ ಅಂತರರಾಷ್ಟ್ರೀಯ ವ್ಯವಸ್ಥೆಯನ್ನು ಅಪೇಕ್ಷಿಸಿದವು ಮತ್ತು ಶ್ರೀಮಂತ ರಾಷ್ಟ್ರಗಳಿಂದ ಬಡ ರಾಷ್ಟ್ರಗಳ ಶೋಷಣೆ ತಪ್ಪಿಸಿ, ಪ್ರಗತಿಗೆ ಸಹಕರಿಸುವಂಥ ರಾಷ್ಟ್ರಗಳಿಂದ ಸನ್ನಿವೇಶವನ್ನು ಸೃಷ್ಟಿಸಬೇಕೆಂದು ಪ್ರಬಲವಾದ ಕೋರಿಕೆಯನ್ನು ಮುಂದಿಟ್ಟಿದ್ದರಿಂದ ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಬಗ್ಗೆ ಚಿಂತನೆ ಪ್ರಾರಂಭವಾಯಿತು.

## ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಉಗಮ (Origin of New International Economic Order) :

ಪ್ರಸಕ್ತ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯು ಅಭಿವೃದ್ಧಿ ರಾಷ್ಟ್ರಗಳ ಅಭಿವೃದ್ಧಿಗೆ ಪೂರಕವಾಗಿಲ್ಲದೆ ಇರುವುದರಿಂದ ಅಂದರೆ ಅಸಮಾನತೆ ಮತ್ತು ಅಸಹಕಾರಕ್ಕೆ ಪ್ರೇರಕವಾಗುವ ರೀತಿಯಲ್ಲಿ ಅಸ್ತಿತ್ವದಲ್ಲಿರುವುದರಿಂದ ನ್ಯಾಯ ಸಮ್ಮತವಾದ ಮತ್ತು ಸಮಾನತೆಯನ್ನಾಧರಿಸಿದ ಹೊಸದೊಂದು ಆರ್ಥಿಕ ವ್ಯವಸ್ಥೆ ಅನುಷ್ಠಾನಗೊಳ್ಳಬೇಕೆಂಬ ಬೇಡಿಕೆ ಅನಭಿವೃದ್ಧಿ ರಾಷ್ಟ್ರಗಳಿಂದ ಪ್ರಬಲವಾದಾಗ 1947ರ ಮೇ ತಿಂಗಳಿನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 6ನೇ ಅಧಿವೇಶನದಲ್ಲಿ ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಸ್ಥಾಪನೆಯ ಬಗೆಗೆ ನಿರ್ಣಯವನ್ನು ಸ್ವೀಕರಿಸಿದ್ದರಿಂದ ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಸ್ಥಾಪನೆಗೆ ಸಂಬಂಧಿಸಿದಂತೆ ಪ್ರಾಶಸ್ತ್ಯ ದೊರೆಯಿತು.

1947ರ ವಿಶ್ವಸಂಸ್ಥೆಯ ಅಧಿವೇಶನದಲ್ಲಿನ ಘೋಷಣೆಯ ಪ್ರಕಾರ ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯು ಯಾವುದೇ ದೇಶದ ಆರ್ಥಿಕ ಮತ್ತು ಸಾಮಾಜಿಕ ನಡವಳಿಕೆಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಎಲ್ಲಾ ದೇಶಗಳ ನಡುವೆ ಸಮಾನ ಭಾವನೆ ಹೊಂದುವಿಕೆ, ಪರಸ್ಪರಾವಲಂಬನೆ, ಸಾರ್ವಭೌಮತ್ವಕ್ಕೆ ಸಮಾನ ಮಾನ್ಯತೆ, ಸಮಾನ ಗೌರವ ಮತ್ತು ಸಹಕಾರವನ್ನು ಆಧಾರವಾಗಿಟ್ಟುಕೊಂಡು ಜಾರಿಗೆ ಬರಬೇಕು. ಆ ಮೂಲಕ ಜಗತ್ತಿನ ರಾಷ್ಟ್ರಗಳನ ನಡುವೆ ಇರುವ ಅಸಮಾನತೆ ನಿವಾರಣೆ ಸಾಧಿಸುವ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳು ಭವಿಷ್ಯದ ಮತ್ತು ಪ್ರಸ್ತುತ ಜನಾಂಗಕ್ಕೆ ಏಕ ಪ್ರಕಾರವಾಗಿ ದೊರೆತು ಶಾಂತಿ ಮತ್ತು ನ್ಯಾಯವನ್ನು ಒದಗಿಸಿಕೊಡುವಂತಿರಬೇಕು ಎಂದು ಜಗತ್ತಿನ ರಾಷ್ಟ್ರಗಳಿಗೆ ಮನವರಿಕೆ ಮಾಡಿಕೊಡಲಾಯಿತು.

ಇದೇ ಅಧಿವೇಶನದಲ್ಲಿ ಕೈಗೊಂಡ ಇನ್ನೊಂದು ನಿರ್ಣಯದ ಪ್ರಕಾರ ಕ್ರಿಯಾ ಯೋಜನೆಯನ್ನು, ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಬಗೆಗೆ ತಯಾರಿಸಲು ಕೈಗೊಳ್ಳಬೇಕಿರುವ ಅಗತ್ಯ ಕ್ರಮಗಳ ಬಗ್ಗೆ ಮಾರ್ಗದರ್ಶಿ ಸೂಚಿಗಳನ್ನು ಒದಗಿಸಿತು. ಅದರಂತೆ "ಜಗತ್ತಿನ ರಾಷ್ಟ್ರಗಳ ನಡುವಿನ ಆರ್ಥಿಕ ಸಹಕಾರವು ವಿಶೇಷವಾಗಿ ಅನಭಿವೃದ್ಧಿ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ನಡುವೆ ಯಾವಾಗಲೂ ಘನತೆ ಮತ್ತು ಸಾರ್ವಭೌಮ

Scanned by CamScanner

ತತ್ವಕ್ಕೆ ಸಹಕಾರಯುತವಾಗಿ ನಡೆಯುವಂತಿರಬೇಕು" ಎಂದು ತಿಳಿಸಲಾಯಿತು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 6ನೇ ಅಧಿವೇಶನದಲ್ಲಿ ನಿರ್ಣಯಗಳನ್ನು ಅಳವಡಿಸಿಕೊಂಡಾಗಿನಿಂದಲೂ ಹಿಂದುಳಿದ ಮತ್ತು ಮುಂದುವರಿದ ರಾಷ್ಟ್ರಗಳ ನಡುವೆ ಸಹಕಾರ ಮತ್ತು ಸಮಾನತೆ ಅಂಶಗಳ ಆಧಾರದ ಮೇಲೆ ಹಲವಾರು ರೀತಿಯ ಚರ್ಚೆಗಳು, ವಿವಿಧ ಸಮಾವೇಶಗಳಲ್ಲಿ ಜರುಗಿಸಿದೆ ಮತ್ತು ಅನಭಿವೃದ್ಧಿ ರಾಷ್ಟ್ರಗಳು ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಉಗಮಕ್ಕೆ ವ್ಯವಸ್ಥಿತವಾದ ಪ್ರಯತ್ನಗಳನ್ನು ನಡೆಸುತ್ತಿವೆ.

ಅಭಿವೃದ್ಧಿ ಹೊಂದಿದ ಮತ್ತು ಹಿಂದುಳಿದ ರಾಷ್ಟ್ರಗಳ, ಉತ್ತರ ಮತ್ತು ದಕ್ಷಿಣ ರಾಷ್ಟ್ರಗಳ ನಡುವೆ ಹಲವಾರು ಬಾರಿ ನಡೆದ ಚರ್ಚೆಯಲ್ಲಿ ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯು ಮುಂದಿನ ಅಂಶಗಳಿಗೆ ಹೆಚ್ಚಿನ ಆದ್ಯತೆ ನೀಡಲು ಪ್ರಯತ್ನಿಸಿದೆ.

1) ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ದಕ್ಷಿಣದ ಬಡದೇಶಗಳಿಗೆ ಹೆಚ್ಚಿನ ನೆರವು ಮತ್ತು ಸಂಪನ್ಮೂಲಗಳ ವರ್ಗಾವಣೆ.

2) ಅನಭಿವೃದ್ಧಿ ರಾಷ್ಟ್ರಗಳು ಉತ್ಪಾದಿಸಿದ ಸಿದ್ಧ ಉತ್ಪನ್ನಗಳ ರಫ್ತುಗಳಿಗೆ ಮುಂದುವರಿದ ರಾಷ್ಟ್ರಗಳ ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರವೇಶಾವಕಾಶ ಕಲ್ಪಿಸುವಿಕೆ.

3) ಪ್ರಾಥಮಿಕ ಕ್ಷೇತ್ರದ ಉತ್ಪನ್ನಗಳ ಮಾರುಕಟ್ಟೆ ರಚನೆ ಮತ್ತು ಬೆಲೆ ನಿರ್ಣಯ ವ್ಯವಸ್ಥೆಯಲ್ಲಿ ಬದಲಾವಣೆಗೆ ಅವಕಾಶ ಕಲ್ಪಿಸುವಿಕೆ.

4) ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಸುಧಾರಣೆ ತರುವ ಮೂಲಕ ಹಿಂದುಳಿದ ರಾಷ್ಟ್ರಗಳ ಪ್ರಗತಿಗೆ ಪೂರಕ ಸನ್ನಿವೇಶ ನಿರ್ಮಿಸುವಿಕೆ

5) ಮುಂದುವರಿದ ರಾಷ್ಟ್ರಗಳ ಬಂಡವಾಳ ಮತ್ತು ತಂತ್ರಜ್ಞಾನ ಮಾರುಕಟ್ಟೆಗಳಲ್ಲಿ ಹಿಂದುಳಿದ ರಾಷ್ಟ್ರಗಳಿಗೆ ಪ್ರವೇಶಾವಕಾಶ.

## ಅನಭಿವೃದ್ಧಿ ರಾಷ್ಟ್ರಗಳ ಬೇಡಿಕೆಗಳು (Demands of under-developed countries)

ಅನಭಿವೃದ್ಧಿ ರಾಷ್ಟ್ರಗಳು ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ನ್ಯಾಯೋಚಿತ ಅವಕಾಶ ದೊರೆಯಬೇಕೆಂಬ ವಿಶ್ವಸಂಸ್ಥೆ ವಿವಿಧ ಅಧಿವೇಶನಗಳಲ್ಲಿ ಮತ್ತು ವಿವಿಧ ಅಂತರ ರಾಷ್ಟ್ರೀಯ ವೇದಿಕೆಗಳಲ್ಲಿ ದಕ್ಷಿಣದ ಬಡದೇಶಗಳು ಹಣಕಾಸು, ವ್ಯಾಪಾರ, ತಂತ್ರಜ್ಞಾನದ ವರ್ಗಾವಣೆ ಮತ್ತು ಅಂತರರಾಷ್ಟ್ರೀಯ ನೀತಿ ನಿರ್ಣಯ ಮೊದಲಾದವುಗಳಲ್ಲಿ ನ್ಯಾಯೋಚಿತ ಅವಕಾಶ ದೊರೆಯಬೇಕೆಂದು ಬೇಡಿಕೆ ಮುಂದಿಟ್ಟು ಪ್ರಯತ್ನಗಳನ್ನು ನಡೆಸುತ್ತಿವೆ.

Scanned by CamScanner

## I ಹಣಕಾಸು ಕ್ಷೇತ್ರ (Finance Sector) :

ಹಣಕಾಸು ಕ್ಷೇತ್ರದಲ್ಲಿ ದಕ್ಷಿಣ ರಾಷ್ಟ್ರಗಳು ಮಂಡಿಸಿರುವ ಬೇಡಿಕೆಗಳೆಂದರೆ

1) ಹಿಂದುಳಿದ ರಾಷ್ಟ್ರಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಮೂಲಕ ಅಧಿಕೃತವಾಗಿ ಬಂಡವಾಳ ಒದಗಿಸುವ ನೆರವಿನಲ್ಲಿ ಹೆಚ್ಚಳ ಮಾಡಬೇಕು.

2) ಮುಂದುವರಿದ ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಆದಾಯದ ಶೇಕಡ 1 ರಷ್ಟನ್ನಾದರೂ ಹಿಂದುಳಿದ ದೇಶಗಳಿಗೆ ಸುಲಭ ಷರತ್ತುಗಳೊಂದಿಗೆ ಸಾಲದ ರೂಪದಲ್ಲಿ ನೀಡಬೇಕು.

3) ಅನಭಿವೃದ್ಧಿ ರಾಷ್ಟ್ರಗಳಲ್ಲಿ ಪ್ರತಿಭಾ ಫಲಾಯನದ ಮೇಲೆ ತೆರಿಗೆ ವಿಧಿಸಲು ಮತ್ತು ಸಾಗರ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ ಆದಾಯ ಹೆಚ್ಚಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು.

## II ವ್ಯಾಪಾರ ಕ್ಷೇತ್ರ (Trade Sector) :

1) ಅಭಿವೃದ್ಧಿ ಹೊಂದಿದ ರಾಷ್ಟ್ರಗಳು, ಹಿಂದುಳಿದ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವ ಪ್ರಾಥಮಿಕ ಸರಕುಗಳಿಗೆ ಹೆಚ್ಚಿನ ಬೆಲೆ ಒದಗಿಸಬೇಕು ಮತ್ತು ಹಿಂದುಳಿದ ರಾಷ್ಟ್ರಗಳ ಸರಕುಗಳಿಗೆ ಆಮದಿನಲ್ಲಿ ಆದ್ಯತೆ ನೀಡಬೇಕು.

2) ಅನಭಿವೃದ್ಧಿ ರಾಷ್ಟ್ರಗಳ ಕೈಗಾರಿಕಾ ಕ್ಷೇತ್ರದ ಉತ್ಪನ್ನಗಳು ಮುಂದುವರಿದ ರಾಷ್ಟ್ರಗಳ ಮಾರುಕಟ್ಟೆ ಪ್ರವೇಶಿಸಲು ಅವಕಾಶ ಕಲ್ಪಿಸಬೇಕು ಮತ್ತು ಸುಂಕೇತರ ರಕ್ಷಣಾ ನೀತಿಯಲ್ಲಿ ಸಡಲಿಕೆ ಜಾರಿಗೊಳಿಸಬೇಕು.

3) ಹಿಂದುಳಿದ ರಾಷ್ಟ್ರಗಳ ರಫ್ತು ಉತ್ಪನ್ನಗಳ ಬೆಲೆ ಸ್ಥಿಮಿತತೆ ಕಾಪಾಡಲು ಸಹಾಯಕವಾಗುವಂತೆ ಒಂದು ಸಾಮಾನ್ಯ ನಿಧಿ ಸ್ಥಾಪಿಸಬೇಕು.

4) ಹಿಂದುಳಿದ ರಾಷ್ಟ್ರಗಳ ನಡುವೆ ಪ್ರಾದೇಶಿಕತೆ ಆಧಾರದಲ್ಲಿ ವ್ಯಾಪಾರ ಅಭಿವೃದ್ಧಿಗೆ ಉತ್ತೇಜನ ನೀಡಬೇಕು.

5) ಅನಭಿವೃದ್ಧಿ ರಾಷ್ಟ್ರಗಳ ರಫ್ತುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನ್ಯಾಯ ಸಮ್ಮತವಾದ ಬೆಲೆ ಒದಗಿಸಬೇಕು.

## III ತಾಂತ್ರಿಕ ಜ್ಞಾನ ಮತ್ತು ಹೂಡಿಕೆ (Technology and Investment) :

1) ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹಿಂದುಳಿದ ದೇಶಗಳಿಗೆ ಕಡಿಮೆ ಬೆಲೆಯಲ್ಲಿ ಸೂಕ್ತ ತಂತ್ರಜ್ಞಾನದ ವರ್ಗಾವಣೆ ಮಾಡಬೇಕು.

Scanned by CamScanner

2) ವಿದೇಶಿ ಬಂಡವಾಳ ಹೂಡಿಕೆಯನ್ನು ಸಂಬಂಧಿಸಿದ ರಾಷ್ಟದ ಕಾನೂನಿನ್ವಯ ರಾಷ್ಟ್ರೀಕರಿಸಲು ಅನಭಿವೃದ್ಧಿ ರಾಷ್ಟ್ರಗಳಿಗೆ ಅವಕಾಶ ಒದಗಿಸುವಿಕೆ.

3) ಬಹುರಾಷ್ಟ್ರೀಯ ಕಂಪನಿಗಳ ಮೇಲೆ ನಿಯಂತ್ರಣ ಮತ್ತು ಹತೋಟಿ ಹೊಂದುವ ಅಧಿಕಾರವನ್ನು ಅನಭಿವೃದ್ಧಿ ರಾಷ್ಟ್ರಗಳಿಗೆ ಒದಗಿಸಬೇಕು.

## IV ಅಂತರರಾಷ್ಟ್ರೀಯ ನೀತಿ ನಿರ್ಣಯದಲ್ಲಿ ಭಾಗವಹಿಸುವಿಕೆ (Participation in International Policy Decision Making) :

ಅಂತರರಾಷ್ಟ್ರೀಯ ನೀತಿ ನಿರ್ಣಯದಲ್ಲಿ ಹೆಚ್ಚಿನ ಅವಕಾಶ ದೊರೆಯುತ್ತಿಲ್ಲವೆಂದು ಹಿಂದುಳಿದ ರಾಷ್ಟ್ರಗಳು ವಾದಿಸಿ. ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ನೀತಿ ನಿರ್ಣಯದಲ್ಲಿ ಹೆಚ್ಚಿನ ಪಾಲು ಒದಗಿಸಬೇಕೆಂದು ಮುಂದಿನ ಬೇಡಿಕೆಯನ್ನು ಮುಂದಿಟ್ಟಿವೆ.

1) ಅನಭಿವೃದ್ಧಿ ದೇಶಗಳು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಪ್ರಬಲ ವೇದಿಕೆಯಾಗಿ ಅಸ್ತಿತ್ವದಲ್ಲಿರುವ ವಿಶ್ವಸಂಸ್ಥೆಗೆ ಆರ್ಥಿಕ ವಿಚಾರಗಳನ್ನು ವರ್ಗಾಯಿಸು ವುದು.

2) ಅಸ್ತಿತ್ವದಲ್ಲಿರುವ ಹಲವು ಅಂತರರಾಷ್ಟ್ರೀಯ ಆರ್ಥಿಕ ಸಂಘಟನೆಗಳ ನಡುವೆ ಸಮನ್ವಯ ಸಾಧಿಸುವುದು ಮತ್ತು ಆರ್ಥಿಕ ಸಂದರ್ಭಗಳಲ್ಲಿ ರಚನಾತ್ಮಕ ಬದಲಾವಣೆ ಜಾರಿಗೆ ತರುವುದು.

ವ್ಯಾಪಾರ ಮತ್ತು ಅಭಿವೃದ್ಧಿ ಮೇಲಿನ ವಿಶ್ವಸಂಸ್ಥೆ ಸಮ್ಮೇಳನವು (UNCTAD) ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕನಿಷ್ಠ 5 ಕ್ಷೇತ್ರಗಳಲ್ಲಿ ಬದಲಾವಣೆ ಜಾರಿಗೆ ತರಬೇಕೆಂದು ಒತ್ತಾಯಿಸಿವೆ ಅವುಗಳೆಂದರೆ,

1) ಬಡರಾಷ್ಟ್ರಗಳ ಪ್ರಾಥಮಿಕ ಕ್ಷೇತ್ರದ ಸರಕುಗಳ ವ್ಯಾಪಾರಕ್ಕಾಗಿ ಒಂದು ಹೊಸ ವ್ಯವಸ್ಥೆ ಸೃಷ್ಟಿಸುವುದು.

2) ಅನಭಿವೃದ್ಧಿ ದೇಶಗಳಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಒಂದು ಹೊಸ ಬಾಹ್ಯ ಚೌಕಟ್ಟನ್ನು ನಿರ್ಮಿಸಿ ಅದರ ಮೂಲಕ ಕೈಗಾರಿಕಾ ಸರಕುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆ ವಿಸ್ತರಣೆಯನ್ನು ಪ್ರೋತ್ಸಾಹಿಸಬೇಕು. ಉತ್ಪಾದನೆ ಹೆಚ್ಚಿಸಲು ತಾಂತ್ರಿಕ ಜ್ಞಾನದ ಅಭಿವೃದ್ಧಿ ಮತ್ತು ಉಪಯೋಗಕ್ಕೆ ಸಂಬಂಧಿಸಿದಂತೆ ಹೊಸದೊಂದು ವ್ಯವಸ್ಥೆಯ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು.

3) ಜಗತ್ತಿನ ಎಲ್ಲಾ ರಾಷ್ಟ್ರಗಳು ಸದಸ್ಯತ್ವ ಹೊಂದಿರುವ ಒಂದು ಹೊಸ ಅಂತರ

Scanned by CamScanner

ರಾಷ್ಟ್ರೀಯ ಹಣಕಾಸಿನ ವ್ಯವಸ್ಥೆ ಜಾರಿಗೆ ತರುವ ಮೂಲಕ ಹಿಂದುಳಿದ ರಾಷ್ಟ್ರಗಳ ಸಂದಾಯ ಬಾಕಿ ಸಮಸ್ಯೆ ಬಗೆಹರಿಸಬೇಕು ಮತು ನೀತಿ ನಿರ್ಣಯಗಳಲ್ಲಿ ಭಾಗವಹಿಸಲು ಬಡರಾಷ್ಟ್ರಗಳಿಗೆ ಅವಕಾಶ ಕಲ್ಪಿಸುವಂತಿರಬೇಕು.

4) ಅನಭಿವೃದ್ಧಿ ರಾಷ್ಟ್ರಗಳ ನಡುವೆ ಪರಸ್ಪರ ಸಹಕಾರ ಏರ್ಪಡಿಸಿ ಬಡರಾಷ್ಟ್ರಗಳ ಸ್ವಾವಲಂಬನೆ ಸಾಧನೆ ಉತ್ತೇಜಿಸುವುದು.

5) ಅನಭಿವೃದ್ಧಿ ರಾಷ್ಟ್ರಗಳು ಮತ್ತು ಸಮಾಜವಾದಿ ರಾಷ್ಟ್ರಗಳ ನಡುವೆ ವ್ಯಾಪಾರದ ವಿಸ್ತರಣೆ ಮತ್ತು ಇತರೆ ವಿನಿಮಯಗಳ ಹೆಚ್ಚಳ ಸಾಧಿಸುವುದು.

ಈ ಮೇಲಿನ ಎಲ್ಲಾ ಉದ್ದೇಶಗಳನ್ನಿಟ್ಟುಕೊಂಡು ಅನಭಿವೃದ್ಧಿ ರಾಷ್ಟ್ರಗಳು ಹೊಸದೊಂದು ಆರ್ಥಿಕ ವ್ಯವಸ್ಥೆ ಜಾರಿಗೆ ಪ್ರಯತ್ನಿಸುತ್ತಿವೆ ಜೊತೆಗೆ ನ್ಯಾಯಯುತ ಬೇಡಿಕೆಗಳನ್ನು ಮುಂದಿಟ್ಟುಕೊಂಡು ರಚನಾತ್ಮಕ ಬದಲಾವಣೆಗೆ ಪ್ರಯತ್ನಿಸುತ್ತಿವೆ. ಆದರೆ ಶ್ರೀಮಂತ ರಾಷ್ಟ್ರಗಳಲ್ಲಿನ ತಜ್ಞರು ಈ ಬೇಡಿಕೆಗಳನ್ನು 'ಬೇರೆಯವರು ಏನು ಮಾಡಬೇಕೆಂಬುದರ ಬಗೆಗಿನ ಭಾಷಣ', 'ದಾನದ ಹೊಸ ರೂಪಗಳ ಬಗೆಗಿನ ಬೇಡಿಕೆ', ಆಸೆಗಳ ಪಟ್ಟಿ, 'ಏನು ಇಲ್ಲದವರಿಂದ ಪ್ರತಿಯೊಂದಕ್ಕೂ ಪಟ್ಟಿ, ಚಂದ್ರನನ್ನು ಹೊಡೆಯಲು ಗುಂಡುಹಾರಿಸುವುದು' ಎಂಬುದಾಗಿ ಟೀಕೆ ಮಾಡಿದ್ದಾರೆ.

ವಿಶ್ವಸಂಸ್ಥೆ ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಸ್ಥಾಪನೆಗಾಗಿ, ವಿಶ್ವಸಂಸ್ಥೆ ಮತ್ತು ವಿಭಿನ್ನ ಆರ್ಥಿಕ ವೇದಿಕೆಗಳು ಹೆಚ್ಚಿನ ಗಮನ ಹರಿಸಿದ್ದರೂ, ಈ ದಿಶೆಯಲ್ಲಿ ಪ್ರಗತಿ ಆಮೆ ಗತಿಯಲ್ಲೇ ಸಾಗುತ್ತಿದೆ. ಆದರೂ ವಿಶ್ವಸಂಸ್ಥೆ 1960 ಮತ್ತು 1970ರ ದಶಕವನ್ನು 'ಪ್ರಥಮ ಅಭಿವೃದ್ಧಿ ಶತಕ' ಮತ್ತು 'ದ್ವಿತೀಯ ಅಭಿವೃದ್ಧಿ ದಶಕ' ಎಂದು ಆಚರಿಸಿ ಹಲವು ರೀತಿಯ ಸವಲತ್ತುಗಳನ್ನು ಅನಭಿವೃದ್ಧಿ ದೇಶಗಳಿಗೆ ಒದಗಿಸಲು ಪ್ರಯತ್ನಿಸಿದೆ ಆದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ನಡುವಿನ ಸಂಘಟನೆ ಮತ್ತು ರಾಜಕೀಯ ಪ್ರಾಬಲ್ಯ ಅನಭಿವೃದ್ಧಿ ರಾಷ್ಟ್ರಗಳ ಬೇಡಿಕೆಯನ್ನು ಈಡೇರಿಸಲು ಅಡ್ಡಿಯಾಗಿದೆ ಎನ್ನಬಹುದು.

## NIEO ಉದ್ದೇಶಗಳು (NIEO's Objectives) :

ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಸೃಷ್ಟಿ ಈ ಮುಂದಿನ ಉದ್ದೇಶಗಳನ್ನು ಹೊಂದಿದೆ.

1) ಅನಭಿವೃದ್ಧಿ ರಾಷ್ಟ್ರಗಳಿಗೆ ಶ್ರೀಮಂತ ರಾಷ್ಟ್ರಗಳಿಂದ ಅಧಿಕ ನೆರವು ಒದಗಿಸುವಿಕೆ

2) ಅನಭಿವೃದ್ಧಿ ರಾಷ್ಟ್ರಗಳಿಗೆ ಶ್ರೀಮಂತ ರಾಷ್ಟ್ರಗಳಿಂದ ಸಂಪನ್ಮೂಲಗಳನ್ನು ವರ್ಗಾಯಿಸುವುದು.

Scanned by CamScanner

3) ಹಿಂದುಳಿದ ರಾಷ್ಟ್ರಗಳ ಕೈಗಾರಿಕಾ ಕ್ಷೇತ್ರದ ಸಿದ್ಧ ಉತ್ಪನ್ನಗಳಿಗೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಾರುಕಟ್ಟೆ ಒದಗಿಸುವುದು.

4) ಮುಂದುವರಿದ ರಾಷ್ಟ್ರಗಳಿಂದ ಆಧುನಿಕ ತಂತ್ರಜ್ಞಾನ ಮತ್ತು ಬಂಡವಾಳ ಪಡೆಯುವುದು.

5) ಅನಭಿವೃದ್ಧಿ ರಾಷ್ಟ್ರಗಳಿಗೆ ಅಭಿವೃದ್ಧಿಯಲ್ಲಿ ಸಮಾನ ಅವಕಾಶ ಮತ್ತು ಸಮಪಾಲು ಒದಗಿಸುವುದು.

6) ಅಂತರರಾಷ್ಟ್ರೀಯ ನೀತಿ ನಿರ್ಣಯಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸುವುದು

7) ಮುಂದುವರಿದ ರಾಷ್ಟ್ರಗಳಿಂದ ವಿಶೇಷ ರಿಯಾಯಿತಿ, ಸಹಾಯಧನ ಮತ್ತು ಇತರೆ ಅನುಕೂಲತೆ ಒದಗಿಸುವುದು.

8) ಅನಭಿವೃದ್ಧಿ ರಾಷ್ಟ್ರಗಳ ಪ್ರಾಥಮಿಕ ಸರಕುಗಳಿಗೆ ವಿಶೇಷ ಪ್ರಾಧಾನ್ಯತೆ ದೊರೆಯುವಂತೆ ನೋಡಿಕೊಳ್ಳುವುದು.

9) ಅನಭಿವೃದ್ಧಿ ರಾಷ್ಟ್ರಗಳು ತಮ್ಮ ನಡುವೆ ಪರಸ್ಪರ ಸಹಕಾರ ಸಾಧಿಸುವುದರ ಮುಖೇನ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು.

10) ಅಂತರರಾಷ್ಟ್ರೀಯವಾಗಿ ಅನಭಿವೃದ್ಧಿ ರಾಷ್ಟ್ರಗಳು ತಮಗಾಗುತ್ತಿರುವ ಅನ್ಯಾಯ ಮತ್ತು ತೊಂದರೆಗಳನ್ನು ತೊಡೆದು ಹಾಕುವುದು.

## ಪ್ರಾದೇಶಿಕ ಸಹಕಾರಕ್ಕಾಗಿ ದಕ್ಷಿಣ ಏಷ್ಯಾ ರಾಷ್ಟ್ರಗಳ ಕೂಟ

## THE SOUTH ASIAN ASSOCIATION FOR REGIONAL CO-OPERATION (SAARC)

ದಕ್ಷಿಣ ಏಷ್ಯಾದ ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರ ಏರ್ಪಡಿಸುವ ದೃಷ್ಟಿಯಿಂದ ಮತ್ತು ಅಭಿವೃದ್ಧಿಗೆ ಪೂರಕವಾದ ವಾತಾವರಣ ಸೃಷ್ಟಿಸಲು ವೇದಿಕೆ ಅಥವಾ ಸಂಘವೊಂದು ಅತ್ಯಾವಶ್ಯಕವೆಂದು ಭಾವಿಸಿದ್ದರಿಂದ 1980ರ ದಶಕದಲ್ಲಿ ನಡೆದ ಹಲವು ರೀತಿಯ ಪ್ರಯತ್ನಗಳ ಫಲವಾಗಿ 1985ರ ಡಿಸೆಂಬರ್ ತಿಂಗಳಲ್ಲಿ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಭೂತಾನ್, ಶ್ರೀಲಂಕಾ ಮತ್ತು ಮಾಲ್ಡೀವ್ಸ್ ದೇಶಗಳನ್ನೊಳಗೊಂಡ ಪ್ರಾದೇಶಿಕ ಕೂಟವು ಅಸ್ತಿತ್ವಕ್ಕೆ ಬಂದಿತು. ಇದರ ಕೇಂದ್ರ ಕಛೇರಿ ನೇಪಾಳದ ಕಠ್ಮಂಡುವಿನಲ್ಲಿದೆ.

Scanned by CamScanner

**ಉದ್ದೇಶಗಳು (Objective) :**

ಸಾರ್ಕ್ ಕೂಟವು ಹೊಂದಿರುವ ಪ್ರಮುಖ ಉದ್ದೇಶಗಳೆಂದರೆ

1) ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿನ ಜನರ ಯೋಗಕ್ಷೇಮ ಹೆಚ್ಚಿಸುವ ಮೂಲಕ ಜನರ ಜೀವನಮಟ್ಟ ಉತ್ತಮಪಡಿಸುವುದು.

2) ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು ಮತ್ತು ಎಲ್ಲಾ ಜನರು ಗೌರವಯುತ ಜೀವನ ನಡೆಸಲು ಅಗತ್ಯ ಪರಿಸರ ನಿರ್ಮಿಸುವುದು.

3) ದಕ್ಷಿಣ ಏಷ್ಯಾ ರಾಷ್ಟ್ರಗಳ ನಡುವೆ ಸಾಮೂಹಿಕ ಸ್ವಾವಲಂಬನೆ ಸಾಧಿಸಲು ಅಗತ್ಯ ನೆರವು ಕಲ್ಪಿಸುವುದು.

4) ಸದಸ್ಯ ದೇಶಗಳ ಸಮಸ್ಯೆಗಳಿಗೆ ಪೂರಕವಾಗಿ ಎಲ್ಲಾ ರೀತಿಯ ಸಹಕಾರ ಒದಗಿಸಲು ಪ್ರಯತ್ನಿಸುವುದು.

5) ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ ಮತ್ತು ವೈಜ್ಞಾನಿಕ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ಮತ್ತು ಸಮನ್ವಯ ಸಾಧಿಸುವುದು.

6) ಇತರ ಅಭಿವೃದ್ಧಿ ಪರ ದೇಶಗಳೊಡನೆ ಆರ್ಥಿಕ ಸಹಕಾರ ಬಲಪಡಿಸುವುದು.

7) ಸದಸ್ಯ ದೇಶಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಅಂತರರಾಷ್ಟ್ರಿಯ ವೇದಿಕೆಗಳಲ್ಲಿ ಚರ್ಚಿಸಲು ಪರಸ್ಪರ ಅವಕಾಶ ನೀಡುವುದು.

8) ಅಭಿವೃದ್ಧಿ ಪರ ಧ್ಯೇಯೋದ್ದೇಶಗಳನ್ನು ಹೊಂದಿರುವ ಇತರೆ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಎಲ್ಲಾ ರೀತಿಯ ನೆರವು ಮತ್ತು ಸಹಕಾರ ಒದಗಿಸುವುದು.

2017
2010

**ಸಾರ್ಕನ ತತ್ವಗಳು (Principles of SAARC) :**

ಸಾರ್ಕ್‌ಕೂಟ ರಚಿಸುವ ಸಂದರ್ಭದಲ್ಲಿ ಅಳವಡಿಸಿಕೊಳ್ಳಲಾಗಿರುವ ತತ್ವಗಳೆಂದರೆ,

1) ಸಾರ್ಕ್‌ನ ಸದಸ್ಯ ರಾಷ್ಟ್ರಗಳ ನಡುವಿನ ಸಹಕಾರವು ರಾಷ್ಟ್ರಗಳ ಸಾರ್ವಭೌಮತ್ವದ ರಾಜಕೀಯ ಸ್ವಾತಂತ್ರ್ಯ, ಪರಸ್ಪರ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ರಹಿತತೆ ಮತ್ತು ಪರಸ್ಪರ ಅನುಕೂಲತೆ ತತ್ವಗಳಿಗೆ, ಭೌಗೋಳಿಕ ಸಮಗ್ರತೆಗೆ ಧಕ್ಕೆ ಬಾರದಂತೆ ಗೌರವ ನೀಡಬೇಕು.

2) ಸಾರ್ಕ್ ಸಹಕಾರವು ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಹಕಾರಕ್ಕೆ ಅಡ್ಡಿಯಾದ

Scanned by CamScanner

ಅಥವಾ ಬದಲಿಯಾದ ಮಾರ್ಗವಾಗಿರುವ ಬದಲು ಅದನ್ನು ಉತ್ತೇಜಿಸುವ ರೀತಿಯಲ್ಲಿರಬೇಕು.

## ಸಾರ್ಕ್‌ನ ಸಮಸ್ಯೆಗಳು (Problems of SAARC) :

ಸಾರ್ಕ್ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದರಿಂದ ತನ್ನ ಉದ್ದೇಶಗಳನ್ನು ಈಡೇರಿಸಲು ಹೋರಾಟ ನಡೆಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಜೊತೆಗೆ ಸಾರ್ಕ್ ಎದುರಿಸುತ್ತಿರುವ ಸಮಸ್ಯೆಗಳು ಸದಸ್ಯ ರಾಷ್ಟ್ರಗಳ ಸಂಬಂಧದ ಮೇಲೆ ದುಷ್ಪರಿಣಾಮ ಉಂಟುಮಾಡಿದೆ ಇದನ್ನು ಮುಂದಿನ ಅಂಶಗಳಿಂದ ತಿಳಿದುಕೊಳ್ಳಬಹುದು.

1) ಸದಸ್ಯ ರಾಷ್ಟ್ರಗಳ ನಡುವಿನ ಗಡಿಸಮಸ್ಯೆಗಳು, ಜನಾಂಗೀಯ ನೀತಿ, ಧಾರ್ಮಿಕ ವಿಚಾರಗಳು, ರಾಜಕೀಯ ವಿಷಯಗಳು ಅಪನಂಬಿಕೆ ಸೃಷ್ಟಿಸಿವೆ ಇದರಿಂದಾಗಿ ಈ ದೇಶಗಳ ನಡುವೆ ಹೊಂದಾಣಿಕೆ ಮತ್ತು ಸಹಕಾರ ಏರ್ಪಡಿಸಿದೆ ಅಭಿವೃದ್ಧಿಗೆ ಅಡ್ಡಿಯಾಗಿದೆ.

2) ಸಾರ್ಕ್‌ನ ಸದಸ್ಯ ರಾಷ್ಟ್ರಗಳಲ್ಲಿ ಏಕ ರೀತಿಯ ಆರ್ಥಿಕ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ಇದರಿಂದಾಗಿ ಪರಸ್ಪರ ಆರ್ಥಿಕ ಸಹಕಾರ ಏರ್ಪಡುತ್ತಿಲ್ಲ.

3) ಸಾರ್ಕ್‌ನ ಸದಸ್ಯ ರಾಷ್ಟ್ರಗಳು ಮುಂದುವರೆದ ರಾಷ್ಟ್ರಗಳಿಗೆ ಹೆಚ್ಚು ಹೆಚ್ಚು ರಫ್ತು ಮಾಡಲು ಪ್ರಯತ್ನಿಸುತ್ತಿದ್ದು, ತಮ್ಮಗಳ ನಡುವೆ ವ್ಯಾಪಾರ ಅಭಿವೃದ್ಧಿ ನಿರ್ಲಕ್ಷಿಸುತ್ತಿದೆ, ಇದರಿಂದಾಗಿಯೂ ನಿರೀಕ್ಷಿತ ಅಭಿವೃದ್ಧಿ ಸಾಧ್ಯವಾಗದೆ ಹಿಂದುಳಿದ ಸ್ಥಿತಿಯಲ್ಲಿ ಉಳಿದುಕೊಳ್ಳುವಂತಾಗಿದೆ.

4) ಸಾರ್ಕ್‌ನ ಸದಸ್ಯ ರಾಷ್ಟ್ರಗಳಲ್ಲಿ ಹೆಚ್ಚಿನ ರಾಷ್ಟ್ರಗಳು ಒಂದೇ ರೀತಿಯ ಉತ್ಪನ್ನ ರಫ್ತು ಮಾಡುವ ರಾಷ್ಟ್ರಗಳಾಗಿದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪರಸ್ಪರ ಪೈಪೋಟಿ ನಡೆಸುತ್ತಿರುವುದು ಅಭಿವೃದ್ಧಿಗೆ ತಡೆಯಾಗಿದೆ. ಉದಾಹರಣೆಗೆ ಭಾರತ ಬಾಂಗ್ಲಾದೇಶ ಸೆಣಬಿನ ಉತ್ಪನ್ನಗಳಲ್ಲೂ ಭಾರತ ಮತ್ತು ಶ್ರೀಲಂಕಾ ಟೀ ಉತ್ಪಾದನೆಯಲ್ಲಿ ಪೈಪೋಟಿ ನಡೆಸಿದರೆ ಸಿದ್ಧ ಉಡುಪುಗಳು, ಸಕ್ಕರೆ ಮೊದಲಾದವುಗಳಲ್ಲಿ ಸದಸ್ಯ ದೇಶಗಳ ನಡುವೆ ತೀವ್ರತರವಾದ ಪೈಪೋಟಿ ಕಾಣಬಹುದಾಗಿದೆ.

5) ಸದಸ್ಯ ರಾಷ್ಟ್ರಗಳು ಅಭಿವೃದ್ಧಿಯ ವಿವಿಧ ಹಂತಗಳಲ್ಲಿ ಮುನ್ನಡೆಯುತ್ತಿದ್ದು, ಇದರಿಂದಾಗಿ ಅವುಗಳ ನಡುವೆ ಪರಸ್ಪರ ಸಹಕಾರ ಮತ್ತು ಹೊಂದಾಣಿಕೆಗೆ ಪ್ರೇರಣೆ ಇಲ್ಲದಂತಾಗಿದೆ.

Scanned by CamScanner

6) ಸಾರ್ಕ್‌ನ ಸದಸ್ಯ ರಾಷ್ಟ್ರಗಳು ಹೆಚ್ಚಿನ ಪ್ರಮಾಣದ ಸರಕುಗಳನ್ನು ಅಭಿ... ಹೊಂದಿದ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿರುವುದರಿಂದ ... ವಿನಿಮಯದ ಕೊರತೆ ಹೆಚ್ಚಿದೆ. ಇದರಿಂದಾಗಿ ಅಭಿವೃದ್ಧಿ ಶೀಲ ಮತ್ತು ಹಿಂ... ರಾಷ್ಟ್ರಗಳು ಹೆಚ್ಚಿರುವ ಸಾರ್ಕ್‌ನಲ್ಲಿ ವ್ಯಾಪಾರ ಅಭಿವೃದ್ಧಿಯಾಗಿದೆ ಸದಸ್ಯ ರಾ... ತೊಂದರೆ ಅನುಭವಿಸುವಂತಾಗಿದೆ.

7) ಸಾರ್ಕ್‌ನ ಸದಸ್ಯ ರಾಷ್ಟ್ರಗಳಲ್ಲಿ ತೃತೀಯ ಕ್ಷೇತ್ರದ ಚಟುವಟಿಕೆಗಳು ... ಪ್ರಗತಿ ಸಾಧಿಸಿಲ್ಲ ಇದರಿಂದಾಗಿ ಸದಸ್ಯ ರಾಷ್ಟ್ರಗಳು ನಡುವೆ ಆರ್ಥಿಕ ಸ... ಏರ್ಪಡದೆ ಇರುವುದರಿಂದ ಪ್ರಗತಿ ಸದಸ್ಯ ರಾಷ್ಟ್ರಗಳ ನಡುವೆ ಉಂಟಾ...

8) ಸಾರ್ಕ್ ಸದಸ್ಯ ರಾಷ್ಟ್ರಗಳು ತಮ್ಮ ನಡುವೆ ಮುಕ್ತ ವ್ಯಾಪಾರವನ್ನು ಅನುಷ್ಠಾ... ಸದೆ ಇರುವುದರಿಂದ ಮತ್ತು ಹಲವು ರೀತಿಯ ನಿರ್ಬಂಧಗಳನ್ನು ... ಮೂಲಕ ವ್ಯಾಪಾರ ವಿಸ್ತರಣೆಗೆ ಅಡ್ಡಿಯಾಗಿರುವುದು ನಿರೀಕ್ಷಿತ ಪ್ರಗ... ಆಗದೆ ಇರಲು ಕಾರಣವಾಗಿದೆ.

ಮೇಲಿನ ಸಮಸ್ಯೆಗಳ ನಡುವೆಯೂ ಸಾರ್ಕ್ ಸದಸ್ಯ ರಾಷ್ಟ್ರಗಳ ನಡುವ... ಸಂಬಂಧ ಏರ್ಪಡಿಸಲು, ವ್ಯಾಪಾರ ಚಟುವಟಿಕೆಗಳನ್ನು ವಿಸ್ತರಿಸಲು ಆರ್ಥಿಕ ... ವೇಗ ಹೆಚ್ಚಿಸಲು ಹಲವು ರೀತಿಯ ಪ್ರಯತ್ನಗಳನ್ನು ನಡೆಸಿದೆ ಜೊತೆಗೆ ನಿರ್ದಿಷ್ಟ ... ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 'ಸಾರ್ಕ್ ವರ್ಷ'ಗಳನ್ನು ಘೋ... ಅದರಂತೆ 2001 ರಿಂದ 2010ರ ದಶಕಗಳನ್ನು 'ಮಗುವಿನ ಹಕ್ಕುಗಳಿಗಾಗಿ ... ದಶಕ' ಎಂದು ಆಚರಿಸಲು ನಿರ್ಧರಿಸಲಾಗಿದೆ. ಜೊತೆಗೆ 2010ರ ವೇಳೆಗೆ ಬಾಲಕಾ... ಪದ್ಧತಿಯನ್ನು ತೊಡೆದು ಹಾಕುವ ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಕೆ ಕಾಯ... ಜಾರಿಗೊಳಿಸಿದೆ. ಹೀಗೆ ಹಲವು ರೀತಿಯ ವಿನೂತನ ಕಾರ್ಯಕ್ರಮಗಳ ಮೂಲಕ ... ರಾಷ್ಟ್ರಗಳಿಗೆ ನಿರ್ದಿಷ್ಟ ಸಮಸ್ಯೆಗಳ ನಿವಾರಣೆಗೆ ಮಾರ್ಗದರ್ಶನ ಮತ್ತು ಪ್ರೋ... ನೀಡುತ್ತಿದೆ.

## ಅಭಿವೃದ್ಧಿ ಶೀಲ ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರ

## ECONOMIC CO-OPERATION AMONG DEVELOPING COUNTRIES

ಮುಂದುವರಿದ ರಾಷ್ಟ್ರಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಗತಿಗೆ ಅನುಕೂಲಕರ... ವಾಗುವಂತಹ ನೀತಿಗಳನ್ನು ಜಾರಿಗೊಳಿಸುವಲ್ಲಿ ನಿರ್ಲಕ್ಷ್ಯ ತೋರಿದ್ದರಿಂದ, ಅಭಿ...

Scanned by CamScanner